ದಿನಾಂಕಃ 02.02.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಡಿ. ವಕೀಲರಿಂದಃ**

ಕೆಲ್ಲೂರು ಗ್ರಾಮದ ಸ.ನಂ.78 ರಲ್ಲಿ ಸರ್ಕಾರಿ ಜಮೀನು ಇತ್ತು ಎಂದರೆ ಗೊತ್ತಿಲ್ಲ. ನಿಪಿ-15 ರ ಜುಬಾನೆ ಹಿಸ್ಸೆಯಲ್ಲಿ ಪ್ರತಿವಾದಿಗಳು ಸ.ನಂ.78 ರ ಜಮೀನಿನಲ್ಲಿ ತಲಾ 6 ಎಕರೆ ಜಮೀನನ್ನು ಹಂಚಿಕೊಳ್ಳುವ ಬಗ್ಗೆ ಒಕ್ಕಣೆ ಇದೆ. ಆ ರೀತಿ 1 ಮತ್ತು 2 ನೇ ಪ್ರತಿವಾದಿಗಳು ಸ.ನಂ.78 ರಲ್ಲಿ ತಲಾ 6 ಎಕರೆ ಜಮೀನನ್ನು ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ಎದುರು ಕ್ಲೈಮ್ 'ಬಿ' ಅನುಸೂಚಿ ಸ್ವತ್ತು ತಿಮ್ಮಯ್ಯ ರವರಿಗೆ ಮಂಜೂರಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿನ ಸಂಬಂಧ ಪಹಣಿಯೂ ಸಹಾ ತಿಮ್ಮಯ ರವರ ಹೆಸರಿನಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ಈ ವಿಚಾರ ನನಗೆ ತಿಳಿದಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಜಮೀನನ್ನು ತಿಮ್ಮಯ್ಯರವರು ದಿ.26.10.2007 ರಂದು 2 ನೇ ಪ್ರತಿವಾದಿಗೆ ಜಿಪಿಎ ಮೂಲಕ ನನಗೆ ಸ್ವಾಧಿನ ಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲ. ಎದುರು ಕ್ಲೈಮ್ 'ಬಿ' ಸ್ವತ್ತಿನಲ್ಲಿ ಹಾಲೀ ದಿನೇಶ್ ರವರ ಕಾಫೀತೋಟ ಇದೆ ಎಂದರೆ ಸರಿಯಲ್ಲ.

2 ನೇ ಪ್ರತಿವಾದಿಗೆ ಸೇರಿದ ಎದುರು ಕ್ಲೈಮ್ 'ಬಿ' ಅನುಸೂಚಿ ಸ್ವತ್ತನ್ನು ಕಬಳಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಸಂಬಂಧ 2 ನೇ ಪ್ರತಿವಾದಿ ಸಿಂಡಿಕೇಟ್ ಬ್ಯಾಂಕ್, ಮೂಡಿಗೆರೆ ಶಾಖೆಯಲ್ಲಿ ಸಾಲ ಪಡೆದಿದ್ದಾರೆ ಎಂದರೆ ಗೊತ್ತಿಲ್ಲ. ಎದುರು ಕ್ಲೈಮ್ 'ಎ' ಅನುಸೂಚಿ ಸ್ವತ್ತು 2 ನೇ ಪ್ರತಿವಾದಿಗೆ ದಿ.26.02.2003 ರಂದು ಮಂಜೂರಿಯಾಗಿದೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿನ ಆಸುಪಾಸು ಎಂ.ಡಿ.ಮಂಜುನಾಥ್ ರವರ ಜಮೀನು ಇದೆ ಎಂದರೆ ಸಾಕ್ಷಿಯು ಅವರ ಹೆಸರು ಗೊತ್ತಿಲ್ಲ ಆದರೆ ಕೊಪ್ಪದವರ ಹಾಗೂ ಪೃಥ್ವೀರಾಜ್ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಜಮೀನಿನ ಉತ್ತರ ದಿಕ್ಕಿಗೆ ಪೃಥ್ವೀರಾಜ್ ರವರ ಜಮೀನು ಇದೆ ಎಂದರೆ ಸಾಕ್ಷಿಯು ತಮಗೆ ಸೇರಿದ ಸ.ನಂ.89 ರ ಜಮೀನಿನ ಉತ್ತರ ದಿಕ್ಕಿಗೆ ಸದರಿ ಪೃಥ್ವೀರಾಜ್ ರವರ ಜಮೀನು ಇದೆ ಎಂದು ನುಡಿಯುತ್ತಾರೆ. ಪೃಥ್ವೀರಾಜ್‌ರವರ ಜಮೀನಿನ ಸ.ನಂ. ನನಗೆ ಗೊತ್ತಿಲ್ಲ. ಸ.ನಂ.89 ರ ಉತ್ತರ ದಿಕ್ಕಿಗೆ ಪೃಥ್ವೀರಾಜ್ ರವರ ಜಮೀನು ಇರುವ ವಿಚಾರವನ್ನು ವಾದಪತ್ರದಲ್ಲಿ ತಿಳಿಸಿದ್ದೇನೆ.

2 ನೇ ಪ್ರತಿವಾದಿಗೆ ಸೇರಿದ ಎದುರು ಕ್ಲೈಮ್ 'ಎ' ಅನುಸೂಚಿ ಸ್ವತ್ತಿನ ಪೂರ್ವ ದಿಕ್ಕಿಗೆ ಎಂ.ಡಿ.ಮಂಜುನಾಥ್ ರವರ ಜಮೀನು ಇದೆ ಎಂದರೆ ಸಾಕ್ಷಿಯು ಸ.ನಂ.78 ರಲ್ಲಿ 2 ನೇ ಪ್ರತಿವಾದಿಗೆ

ಸೇರಿದ ಯಾವುದೇ ಜಮೀನು ಇಲ್ಲ ಎಂದು ನುಡಿಯುತ್ತಾರೆ. ಎದುರು ಕ್ಲೈಮ್ 'ಎ' ಮತ್ತು 'ಬಿ' ಅನುಸೂಚಿ ಸ್ವತ್ತುಗಳು 2 ನೇ ಪ್ರತಿವಾದಿಯ ಸ್ವಾಧೀನದಲ್ಲಿ ಇರುವ ವಿಚಾರ ನನಗೆ ಗೊತ್ತಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಹಿಂದೆ ಮಾಕೋನಹಳ್ಳಿ ಗ್ರಾಮದ ಸ.ನಂ.416/3 ರ ಜಮೀನಿಗೆ ಮತ್ತು ಇತರೆ ಕುಟುಂಬದ ಸ್ವತ್ತುಗಳಿಗೆ ಸಂಬಂಧಿಸಿದಂತೆ ಎಂ.ಬಿ.ಪ್ರಭಣ್ಣ ಎನ್ನುವವರಿಗೆ ಪತ್ರ ಬರೆದಿದ್ದೆ ಎಂದರೆ ಸರಿಯಲ್ಲ. ಸ.ನಂ.416/3 ರಲ್ಲಿ ಇರುವ ಅಂಥೋರಿಯಮ್ ಪ್ಲಾಂಟ್ ನ್ನು ಕೊಡುವಂತೆ 1 ನೇ ಪ್ರತಿವಾದಿಗೆ ಕೇಳಿಕೊಂಡಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನ್ನ ಕೋರಿಕೆಯನ್ನು ತಿರಸ್ಕರಿಸಿದರು ಎಂದರೆ ಸರಿಯಲ್ಲ. ಈ ಕಾರಣಕ್ಕೆ ನಾನು ಗ್ರಾಮಸ್ಥರಿಗೆ ಹಾಗೂ ಪ್ರಭಣ್ಣರವರಿಗೆ ಪತ್ರ ಬರೆದು ಅಂಥೋರಿಯಮ್ ಪ್ಲಾಂಟ್ ನ್ನು ಕೊಡಿಸಿಕೊಡುವಂತೆ ಕೇಳಿಕೊಂಡಿದ್ದೆ ಎಂದರೆ ಸರಿಯಲ್ಲ. ಈ ಕಾರಣ ಪ್ರತಿವಾದಿಗಳ ವಿರುದ್ದ ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಸದರಿ ಅಂಥೋರಿಯಮ್ ಪ್ಲಾಂಟ್ ನ್ನು ಹೇಗಾದರೂ ಕಬಳಿಸಬೇಕು ಎಂಬ ಉದ್ದೇಶದಿಂದ ಸ.ನಂ.416/3 ರ ಪ್ಲಾಂಟಿಗೆ ಅತೀಕ್ರಮ ಪ್ರವೇಶ ಮಾಡಿ ಪ್ರತಿವಾದಿಗಳ ಸ್ವಾಧೀನಕ್ಕೆ ತೊಂದರೆ ಕೊಡಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ಈ ಕಾರಣಕ್ಕೆ ಪ್ರತಿವಾದಿಗಳು ನನ್ನ ವಿರುದ್ದ ಅ.ದಾ.ಸಂ.114/2019 ನ್ನು ಸಲ್ಲಿಸಿದ್ದಾರೆ ಎಂದರೆ ಸರಿ, ಆದರೆ ನಾನು ಪ್ರತಿವಾದಿಗಳಿಗೆ ಯಾವುದೇ ತೊಂದರೆ ಕೊಟ್ಟಿಲ್ಲ. ಸ.ನಂ.416/3 ರ ಜಮೀನಿನಲ್ಲಿ ನನ್ನ ಸ್ವಂತ ಮನೆ ಇಲ್ಲ. ಪ್ರತಿವಾದಿಗಳಿಗೆ ಸೇರಿದ ಎದುರು ಕ್ಲೈಮ್ ಅನುಸೂಚಿ ಸ್ವತ್ತುಗಳಿಗೆ ದಿ.09.10.2019 ರಂದು ಅತೀಕ್ರಮ ಪ್ರವೇಶ ಮಾಡಲು ಪ್ರಯತ್ನಿಸಿದ್ದೆ ಎಂದರೆ ಸಾಕ್ಷಿಯು ಪ್ರತಿವಾದಿಗಳಿಗೆ ಯಾವುದೇ ಜಮೀನು ಇಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿಗಳು ಈ ಹಿಂದೆ ನನ್ನ ವಿರುದ್ದ ಮೂಡಿಗೆರೆ ಪೋಲಿಸ್ ಠಾಣೆಯಲ್ಲಿ ದೂರು ಕೊಟ್ಟಿದ್ದರು ಎಂದರೆ ಸರಿಯಲ್ಲ. ನ್ಯಾಯಾಲಯದ ಆದೇಶವಿದ್ದರೂ ಸಹಾ ನಾನು ಪ್ರತಿವಾದಿಗಳ ಜಮೀನುಗಳಿಗೆ ಹೋಗಿ ಕಾಫೀಗಿಡಗಳನ್ನು ನಾಶ ಮಾಡಿದ್ದೇನೆ ಎಂದರೆ ಸರಿಯಲ್ಲ.

ಎದುರು ಕ್ಲೈಮ್ ಅನುಸೂಚಿ ಸ್ವತ್ತುಗಳಿಂದ ಪ್ರತಿವಾದಿಗಳನ್ನು ಹೊರಗೆ ಹಾಕಬೇಕು ಎಂಬ ಉದ್ದೇಶದಿಂದ ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-15 ರ ಜುಬಾನೆ ಹಿಸ್ಸೆ ಮಾಡಿಕೊಂಡಿರುವ ವಿಷಯ ಸುಳ್ಳು ಹಾಗೂ ಅದಕ್ಕೆ ಕಾನೂನಿ ಅಡಿ ಮಾನ್ಯತೆ ಇಲ್ಲ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಗಳಿಗೆ ಯಾವುದೇ ರೀತಿ ಹಕ್ಕು ಇಲ್ಲ ಎಂದು ಹೇಳಿಕೊಂಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ವಾದಪತ್ರದ ಪಾರ ನಂ.4 ರಲ್ಲಿ ಬರೆಸಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ. ಈ ದಾವೆಯನ್ನು ಸಲ್ಲಿಸಲು ನನಗೆ ಯಾವುದೇ ವ್ಯಾಜ್ಯ

ಕಾರಣ ಇಲ್ಲ ಎಂದರೆ ಸರಿಯಲ್ಲ.

ಸ.ನಂ.416/3 ರಲ್ಲಿರುವ ಅಂಥೋರಿಯಮ್ ಪ್ಲಾಂಟ್ ಮತ್ತು ಜಮೀನನ್ನು ರೂ.65 ಲಕ್ಷಗಳಿಗೆ ಕೊಡುವಂತೆ 1 ನೇ ಪ್ರತಿವಾದಿಗೆ ಬೇಡಿಕೆ ಇಟ್ಟಿದ್ದೆ ಎಂದರೆ ಗೊತ್ತಿಲ್ಲ. ಗುಡ್ಡದ ತೋಟ ಎಂದರೆ ಕೆಲ್ಲೂರು ಗ್ರಾಮದ ಸ.ನಂ.89 ರ ಜಮೀನು. ಈ ಜಮೀನನ್ನು ಸಹಾ 2 ನೇ ಪ್ರತಿವಾದಿ ನನಗೆ ಕೊಡಬೇಕು ಎಂದು ನಾನು ಪ್ರಭಣ್ಣ ರವರಿಗೆ ಬರೆದ ಪತ್ರದಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಎಂ.ಪಿ.ಸೋಮಣ್ಣ ತೋಟದಲ್ಲಿ ಪ್ರತಿವಾದಿಗಳಿಗೆ ತಲಾ 10 ಎಕರೆಯಂತೆ ನಾನೇ ಖರೀದಿ ಮಾಡಿ ಕೊಟ್ಟಿರುತ್ತೇನೆ. ಆ ರೀತಿ ಖರೀದಿ ಮಾಡಿದ್ದ ವರ್ಷ ನೆನಪಿಲ್ಲ. ಈ ಜಮೀನು ದಾವಾ ಅನುಸೂಚಿ ಸ್ವತ್ತುಗಳ ಯಾವ ದಿಕ್ಕಿನಲ್ಲಿಯೂ ಸಹಾ ಇಲ್ಲ. ವಿಮಲರವರಿಗೆ ಕೆಲ್ಲೂರು ಗ್ರಾಮದ ಸ.ನಂ.38/2 ಮತ್ತು 38/3 ರ ಜಮೀನನ್ನು ಖರೀದಿ ಮಾಡಿ ಕೊಟ್ಟಿರುತ್ತೇನೆ.

ಪ್ರತಿವಾದಿಗಳಿಗೆ ನಾನು 1996, 2000 ಮತ್ತು 2012 ಸಾಲಿನಲ್ಲಿ ಕಾರುಗಳನ್ನು ತೆಗೆದುಕೊಟ್ಟಿರುತ್ತೇನೆ. 1996 ರಲ್ಲಿ KA-02-P-5255, 2000 ಇಸವಿಯಲ್ಲಿ KA-02-AC-5255 ಮತ್ತು 2012 ರಲ್ಲಿ KA-41-Z-5255 ಹಾಗೂ KA-02-MH-5255 ನೋಂದಣಿ ಸಂಖ್ಯೆಯ ಕಾರಗಳನ್ನು ಪ್ರತಿವಾದಿಗಳಿಗೆ ಕೊಟ್ಟಿದ್ದೇನೆ. ಆ ಕಾರಗಳ RC ಪುಸ್ತಕ ನನ್ನ ಬಳಿಯೇ ಇದೆ. ದಾವಾ ಸ್ವತ್ತುಗಳಿಗೆ ಸುಳ್ಳು ಚೆಕ್ಕುಬಂದಿ ಸೃಷ್ಟಿಸಿ, ಸುಳ್ಳು ವ್ಯಾಜ್ಯ ಕಾರಣ ಸೃಷ್ಟಿಸಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳು ಒಟ್ಟುಕುಟುಂಬದ ಸ್ವತ್ತುಗಳು ಎಂದರೆ ಸರಿಯಲ್ಲ. ಈ ದಾವೆಯನ್ನು ಹಾಗೂ ಅ.ದಾ.ಸಂ.124/2019 ಮತ್ತು ಅ.ದಾ.ಸಂ.128/2019 ರಂತೆ ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಲಕ್ಷ್ಮಣಗೌಡ, ಹುಚ್ಚೇಗೌಡ ಮತ್ತು ಚಂದ್ರೇಗೌಡರವರ ಜಮೀನುಗಳನ್ನು ಪ್ರತಿವಾದಿಗಳಿಗೆ ಬರೆದುಕೊಡುತ್ತೇನೆ ಎಂದು ನಾನು ಹೇಳಿದ್ದೆ ಎಂದರೆ ಸರಿಯಲ್ಲ. ಸ.ನಂ.416/2 ರಲ್ಲಿ ಇರುವ ನನ್ನ ಮನೆಯನ್ನು ನನ್ನ ತಾಯಿ ಶಾರದಮ್ಮ ರವರಿಗೆ ಕೊಡುತ್ತೇನೆ ಎಂದು ಹೇಳಿದ್ದೆ ಎಂದರೆ ಸರಿಯಲ್ಲ. ಈಗಾಗಲೇ ಪ್ರತಿವಾದಿಗಳಿಗೆ ಕೊಟ್ಟ ಕಾರುಗಳನ್ನು ಅವರೇ ಇಟ್ಟುಕೊಳ್ಳುವಂತೆ ಹಾಗೂ ಆ ಕಾರುಗಳಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆ ಮಾಡುವುದಿಲ್ಲ ಎಂದು ನಾನು ಹೇಳಿದ್ದೆ ಎಂದರೆ ಸರಿಯಲ್ಲ. ನಮ್ಮ ಒಟ್ಟು ಕುಟುಂಬದ ಸ್ವತ್ತುಗಳಿಂದ ಬಂದ ಆದಾಯದಿಂದ ಬೆಂಗಳೂರಿನಲ್ಲಿ ಮನೆ ಮತ್ತು ಸೈಟ್ ನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಬೆಂಗಳೂರಿನ ಪ್ರತಿಷ್ಠಿತ ಜಾಗದಲ್ಲಿ ನನಗೆ ಒಂದು ಮನೆ ಮತ್ತು ಒಂದು ಸೈಟ್ ಇದೆ ಎಂದರೆ ಸರಿ. ದಾವಾ ಸ್ವತ್ತುಗಳನ್ನು ಸೇರಿದಂತೆ ಬೆಂಗಳೂರಿನಲ್ಲಿರುವ ನನ್ನ

ಮನೆ ಮತ್ತು ಸೈಟ್ ನಲ್ಲಿ ಭಾಗ ಕೊಡುವಂತೆ ಪ್ರತಿವಾದಿಗಳು ನನ್ನ ಬಳಿ ಕೇಳಿದ್ದರು ಎಂದರೆ ಸರಿಯಲ್ಲ. ಈ ವಿಚಾರಕ್ಕೆ ಸಿಟ್ಟುಗೊಂಡು ಅಂಥೋರಿಯಮ್ ಪ್ಲಾಂಟ್ ನ್ನು ನಾಶಮಾಡಲು ಪ್ರಯತ್ನಿಸಿದ್ದೆ ಎಂದರೆ ಸರಿಯಲ್ಲ. ನಾನು ಬೆಂಗಳೂರಿನಲ್ಲಿ ಅಚಲ್ ಕೇಬಲ್ ವರ್ಕ್ ಎಂಬ ಕೇಬಲ್ ನೆಟ್ ವರ್ಕ್ ಹೊಂದಿದ್ದೇನೆ ಎಂದರೆ ಸರಿ. ಆದ್ದರಿಂದ ನಾನು ಸಮಾಜದಲ್ಲಿ ಬಾಲಾಢ್ಯನಾಗಿದ್ದು ಅಮಾಯಕರಿಗೆ ಒತ್ತಡ ಮಾಡುವ ಪ್ರವೃತ್ತಿ ಹೊಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿರುವ ಎಲ್ಲಾ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.